## ದಿನಾಂಕ:29-05-2010 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯ ನಡವಳಿಗಳು

## ವಿಷಯದ ಸಂಖ್ಯೆ: 10 (32)/2010-11

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೆಂಗಳೂರು ನಗರದಲ್ಲಿ ಅನುಪಯುಕ್ತ ಪ್ಲಾಸ್ಟಿಕ್ ಕಸದಿಂದ ಆಗುತ್ತಿರುವ ಪರಿಸರ ಮಾಲಿನ್ಯವನ್ನು ತಡೆಗಟ್ಟಲು ಅನುಪಯುಕ್ತ ಪ್ಲಾಸ್ಟಿಕ್ ಕಸವನ್ನು ಸದ್ಬಳಕೆ ಮಾಡಿಕೊಳ್ಳುವ ಸಲುವಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಕೈಗೊಳ್ಳುವ ಎಲ್ಲಾ ಡಾಂಬರೀಕರಣ ಕಾಮಗಾರಿಯ ಮೇಲ್ಪದರದಲ್ಲಿ ಬ್ಲೆಂಡೆಡ್ ವೇಸ್ಟ್ ಪ್ಲಾಸ್ಟಿಕ್ ಅನ್ನು ಉಪಯೋಗಿಸಿ ರಸ್ತೆಯನ್ನು ದೀರ್ಘಾವದಿ ಕಾಲ ಬಾಳುವಂತೆ ಮಾಡಲು ಉದ್ದೇಶಿಸಿ ಪಾಲಿಕೆಯು ಬ್ಲೆಂಡೆಡ್ ವೇಸ್ಟ್ ಪ್ಲಾಸ್ಟಿಕ್‌ನ ಪೇಟೆಂಟ್ ಪಡೆದಿರುವ ಮೆ॥ ಕೆ.ಕೆ.ಪ್ಲಾಸ್ಟಿಕ್ ವೇಸ್ಟ್ ಮ್ಯಾನೇಜ್‌ಮೆಂಟ್ ಪ್ರೈ.ಲಿ. ರವರೊಂದಿಗೆ ದಿ:07/12/2007 ರಂದು ಒಡಂಬಡಿಕೆಯನ್ನು (Memorandum of understanding) ಎರಡು ವರ್ಷಗಳ ಅವಧಿಗೆ ಮಾಡಿಕೊಳ್ಳಲಾಗಿರುತ್ತದೆ. ಸದರಿ ವಿಷಯಕ್ಕೆ ಸಂಬಂಧಿಸಿದ ಕೆಲವು ಅಂಶಗಳು ಈ ಕೆಳಗಿನಂತಿವೆ.

ಸದರಿ ಒಡಂಬಡಿಕೆಯು ಎರಡು ವರ್ಷಗಳ ಅವಧಿಯದಾಗಿದ್ದು, ದಿ:06/12/2009 ರಂದು ಒಡಂಬಡಿಕೆಯ ಕಾಲಾವಧಿಯು ಮುಕ್ತಾಯವಾಗಿರುತ್ತದೆ. ಈ ಕಾಲಾವಧಿಯಲ್ಲಿ ಪಾಲಿಕೆ ವ್ಯಾಪ್ತಿಯ ಒಟ್ಟು 1200 ಕಿ.ಮೀ ಉದ್ದದ ರಸ್ತೆಗಳಿಗೆ ಪ್ಲಾಸ್ಟಿಕ್ ವೇಸ್ಟ್ ಬಳಸಿ ಡಾಂಬರೀಕರಣ ಮಾಡಲಾಗಿದ್ದು, ರಸ್ತೆಗಳು ಸುಸ್ಥಿತಿಯಲ್ಲಿವೆ.

ಮೆ॥ ಕೆ.ಕೆ.ಪ್ಲಾಸ್ಟಿಕ್ ವೇಸ್ಟ್ ಮ್ಯಾನೇಜ್‌ಮೆಂಟ್ ಪ್ರೈ.ಲಿ. ರವರು ಡಾಂಬರು ಕಾಮಗಾರಿಗಳಲ್ಲಿ ಡಾಂಬರಿನ ಜೊತೆಗೆ ಬ್ಲೆಂಡೆಡ್ ವೇಸ್ಟ್ ಪ್ಲಾಸ್ಟಿಕ್ ಅನ್ನು ಮಿಶ್ರಣಗೊಳಿಸಿ ಬಳಸುವ ತಾಂತ್ರಿಕ ವಿಷಯಕ್ಕೆ ಸಂಬಂಧಿಸಿದಂತೆ ಪೇಟೆಂಟ್ ಪಡೆದಿರುತ್ತಾರೆ. ಪ್ಲಾಸ್ಟಿಕ್ ವೇಸ್ಟ್ ಅನ್ನು ಡಾಂಬರೀಕರಣ ಮೇಲ್ಪದರಕ್ಕೆ ಬಳಸುವುದರಿಂದ ರಸ್ತೆಯು ದೀರ್ಘಕಾಲ ಬಾಳುವುದಾಗಿ Highway Journal ನಲ್ಲಿ ತಿಳಿಸಲಾಗಿದೆ.

ಬ್ಲೆಂಡೆಡ್ ವೇಸ್ಟ್ ಪ್ಲಾಸ್ಟಿಕ್ ಅನ್ನು ಉಪಯೋಗಿಸಿ ರಸ್ತೆ ನಿರ್ಮಾಣ ಮಾಡುತ್ತಿರುವ ಬಗ್ಗೆ ಹಲವಾರು ಸ್ಥಳೀಯ ಹಾಗೂ ವಿದೇಶಿ ಪತ್ರಿಕೆಗಳು (ನ್ಯೂಯಾರ್ಕ್ ಟೈಮ್ಸ್) ಶ್ಲಾಘನೆ ವ್ಯಕ್ತಪಡಿಸಿದ್ದು, ಸಿಬಿಎಸ್‌ಸಿಯ 12ನೇ ತರಗತಿಯ ಪಠ್ಯಪುಸ್ತಕದಲ್ಲಿ ಸಹ ಸದರಿ ಪ್ಲಾಸ್ಟಿಕ್ ವೇಸ್ಟ್ ಉಪಯೋಗಿಸಿ ರಸ್ತೆ ನಿರ್ಮಿಸುವ ವಿಷಯವನ್ನು ಅಳವಡಿಸಿಕೊಳ್ಳಲಾಗಿದೆ.

ಡಾಂಬೀಕರಣದ ಮೇಲ್ಪದರದಲ್ಲಿ ಡಾಂಬರಿನ ಪರಿಮಾಣದ ಶೇ.8 ರಷ್ಟು ಬ್ಲೆಂಡೆಡ್ ವೇಸ್ಟ್ ಪ್ಲಾಸ್ಟಿಕ್ ಅನ್ನು ಮಿಶ್ರಣ ಮಾಡಲು ಹಾಗೂ ಪ್ರತಿ ಒಂದು ಕೆ.ಜಿ ಬ್ಲೆಂಡೆಡ್ ವೇಸ್ಟ್ ಪ್ಲಾಸ್ಟಿಕ್‌ಗೆ ರೂ.27 ಮೊತ್ತವನ್ನು ಪಾವತಿಸಲು ಒಡಂಬಡಿಕೆಯುಲ್ಲಿ ಸೂಚಿಸಲಾಗಿರುತ್ತದೆ. ಮೆ॥ ಕೆ.ಕೆ.ಪ್ಲಾಸ್ಟಿಕ್ ವೇಸ್ಟ್ ಮ್ಯಾನೇಜ್‌ಮೆಂಟ್ ಪ್ರೈ.ಲಿ. ರವರೊಂದಿಗಿನ ಒಡಂಬಡಿಕೆಯು ದಿ:06/12/2009 ರಂದು ಮುಕ್ತಾಯಗೊಂಡಿದ್ದು, ದಿ:05/10/2009 ರಂದು ಸದರಿ ಸಂಸ್ಥೆಯವರು ಪತ್ರ ಬರೆದು ಸದರಿ ಒಡಂಬಡಿಕೆಯನ್ನು ಇನ್ನು ಎರಡು ವರ್ಷಗಳ ಅವಧಿಗೆ ವಿಸ್ತರಿಸಲು ಕೋರಿರುತ್ತಾರೆ.

ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಬ್ಲೆಂಡೆಡ್ ವೇಸ್ಟ್ ಪ್ಲಾಸ್ಟಿಕ್ ಅನ್ನು ಪಾಲಿಕೆ ವ್ಯಾಪ್ತಿಯಲ್ಲಿ ಕೈಗೊಳ್ಳುವ ಡಾಂಬರೀಕರಣದ ಡಾಂಬರು ಮಿಶ್ರಣದಲ್ಲಿ ಉಪಯೋಗಿಸಲು ತೆರೆದ ಟೆಂಡರ್ ಕರೆಯುವ ಬಗ್ಗೆ ಕಾನೂನು ಕೋಶದ ಅಭಿಪ್ರಾಯ ಕೋರಲಾಗಿ, ಮೆ॥ ಕೆ.ಕೆ.ಪ್ಲಾಸ್ಟಿಕ್ ವೇಸ್ಟ್ ಮ್ಯಾನೇಜ್‌ಮೆಂಟ್ ಪ್ರೈ.ಲಿ. ರವರು ಬ್ಲೆಂಡೆಂಡ್ ವೇಸ್ಟ್ ಪ್ಲಾಸ್ಟಿಕ್‌ನ ತಾಂತ್ರಿಕತೆಗೆ ಪೇಟೆಂಟ್ ಪಡೆದಿದ್ದು, ರಸ್ತೆ ನಿರ್ಮಿಸುವ ಕಾಮಗಾರಿಯಲ್ಲಿ ಪ್ಲಾಸ್ಟಿಕ್ ಡಾಂಬರು ಮಿಶ್ರಣದಲ್ಲಿ ಉಪಯೋಗಿಸುವ ಬಗ್ಗೆ ಟೆಂಡರ್ ಅಹ್ವಾನಿಸಲು ಕಾನೂನಿನ ಅಡಿಯಲ್ಲಿ ಯಾವುದೇ ಅವಕಾಶ ಕಂಡುಬರುವುದಿಲ್ಲವೆಂದು ಕಾನೂನು ಕೋಶ ಮುಖ್ಯಸ್ಥರು ತಿಳಿಸಿರುತ್ತಾರೆ.

ಮೇಲಿನ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದುಕೊಳ್ಳುತ್ತಾ, ಪಾಲಿಕೆಯಿಂದ ಬದ್ಧರಾಗಿರುವ ಈ ಕೆಳಗಿನ ಅಂಶವನ್ನು ಸಹ ಅಳವಡಿಸಿಕೊಳ್ಳಲಾಗಿರುತ್ತದೆ.

ರಸ್ತೆ ಡಾಂಬರು ಕಾಮಗಾರಿ ಮೇಲ್ಪದರಕ್ಕೆ ಉಪಯೋಗಿಸುವ ವೇಸ್ಟ್ ಪ್ಲಾಸ್ಟಿಕ್‌ನ ಪ್ರತಿ ಕೆ.ಜಿ.ಗೆ ರೂ.27.00 ಗಳನ್ನು ಪಾಲಿಕೆಯು ಸರಬರಾಜುದಾರರಾದ ಮೆ॥ ಕೆ.ಕೆ.ಪ್ಲಾಸ್ಟಿಕ್ ವೇಸ್ಟ್ ಮ್ಯಾನೇಜ್‌ಮೆಂಟ್ ಪ್ರೈ.ಲಿ. ರವರಿಗೆ ನೇರವಾಗಿ ಪಾವತಿಸುವುದು. ಪಾಲಿಕೆಯಲ್ಲಿ ಕೈಗೆತ್ತಿಕೊಳ್ಳುವ ಎಲ್ಲಾ ಡಾಂಬರು ಕಾಮಗಾರಿಗಳ ಅಂದಾಜುಪಟ್ಟಿಯಲ್ಲಿ ಪ್ಲಾಸ್ಟಿಕ್ ಉಪಯೋಗಕ್ಕಾಗಿ ಪ್ರತ್ಯೇಕ ಐಟಂ ಅವಕಾಶ ಮಾಡಿಕೊಳ್ಳತಕ್ಕದ್ದು ಹಾಗೂ ಪ್ಲಾಸ್ಟಿಕ್ ಸರಬರಾಜು ಮಾಡುವ ಸಂಸ್ಥೆಗೆ ಪ್ರತ್ಯೇಕವಾಗಿ ಪಾವತಿಸುವುದು.

ಈಗಾಗಲೇ ಅಂದಾಜು ಪಟ್ಟಿಯಲ್ಲಿ ಪ್ಲಾಸ್ಟಿಕ್ ಅಂಶ ಅಳವಡಿಸದೇ ಇದ್ದು, ಅಂತಹ ಕಾಮಗಾರಿಯಲ್ಲಿ ಪ್ಲಾಸ್ಟಿಕ್ ಬಳಕೆಯಾಗದಿದ್ದಲ್ಲಿ ಇಂತಹ ಸಂದರ್ಭದಲ್ಲಿ ಪ್ಲಾಸ್ಟಿಕ್ ಸರಬರಾಜು ಮಾಡಿದ ಸಂಸ್ಥೆಗೆ ಹಣ ಪಾವತಿಸಲು ಕ್ರಮ ತೆಗೆದುಕೊಳ್ಳುವುದು.

ಸದರಿ ಸಂಸ್ಥೆಗೆ ಕರಾರಿನಲ್ಲಿ ಡಾಂಬರೀಕರಣದ ಜೊತೆಗೆ ಉಪಯೋಗಿಸಿದ ಪ್ಲಾಸ್ಟಿಕ್ ಪ್ರಮಾಣವನ್ನು ಒಂದನೇ ಪಾರ್ಟಿಯಿಂದ ಪಡೆಯುವ ಸಂಬಂಧಪಟ್ಟ ಕಾಮಗಾರಿ ಅಭಿಯಂತರರುಗಳು ಇಂತಿಷ್ಟೇ ಪ್ರಮಾಣವನ್ನು ಪ್ಲಾಸ್ಟಿಕ್ ಅನ್ನು ರಸ್ತೆಯ ಡಾಂಬರೀಕರಣಕ್ಕೆ ಬಳಸಲಾಗಿದೆ ಎಂಬ ಬಗ್ಗೆ ದೃಢೀಕರಣವನ್ನು ಪಡೆಯುವ ಷರತ್ತಿಗೆ ಒಳಪಡಿಸುವುದು.

ಈ ಮೇಲಿನ ಹಿನ್ನೆಲೆಯಲ್ಲಿ, ಈ ಕೆಳಕಂಡ ಅಂಶಗಳಿಗೆ ಅನುಮೋದನೆ ಕೋರಿದೆ:

1. ಡಾಂಬರೀಕರಣ ಕಾಮಗಾರಿಯ ಮೇಲ್ಪದರಗಳಲ್ಲಿ ಬ್ಲೆಂಡೆಡ್ ವೇಸ್ಟ್ ಪ್ಲಾಸ್ಟಿಕ್ ಅನ್ನು ಉಪಯೋಗಿಸಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಮೆ॥ ಕೆ.ಕೆ.ಪ್ಲಾಸ್ಟಿಕ್ ವೇಸ್ಟ್ ಮ್ಯಾನೇಜ್‌ಮೆಂಟ್ ಪ್ರೈ.ಲಿ. ರವರೊಂದಿಗೆ ಈಗಾಗಲೇ ಮಾಡಿಕೊಂಡಿರುವ ಒಡಂಬಡಿಕೆಯನ್ನು (Memorandum of understanding), ದಿ:07/12/2009 ರಿಂದ ದಿ:06/12/2011 ರವರೆಗೆ (ಎರಡು ವರ್ಷಗಳು) ವಿಸ್ತರಿಸಲು ಅನುಮೋದನೆ.

2. ಈಗಾಗಲೇ ಪಾಲಿಕೆಯಲ್ಲಿ ಬ್ಲೆಂಡೆಡ್ ವೇಸ್ಟ್ ಪ್ಲಾಸ್ಟಿಕ್ ಪ್ರತಿ ಒಂದು ಕೆ.ಜಿಗೆ ರೂ.27 ದರವನ್ನು ಮುಂದಿನ ಎರಡು ವರ್ಷಗಳ ಅವಧಿಗೆ ಅಳವಡಿಸಲು ಅನುಮೋದನೆ.

ಮೇಲ್ಕಂಡ ಎರಡು (2) ಅಂಶಗಳಿಗೆ ಅನುಮೋದನೆ ಕೋರಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿ:15-05-2010 ರ ಟಿಪ್ಪಣಿ.

ಆಡಳಿತ ಪಕ್ಷದ ನಾಯಕರಾದ ಶ್ರೀ ಬಿ.ಎಸ್. ಸತ್ಯನಾರಾಯಣರವರು ಕೆಳಕಂಡ ನಿರ್ಣಯವನ್ನು ಮಂಡಿಸಿದರು

ನಿರ್ಣಯ:- ದಿನಾಂಕ: 15-05-2010ರ ಆಯುಕ್ತರ ಟಿಪ್ಪಣಿಯನ್ನು ಒಪ್ಪುವುದು.

ಶ್ರೀ ಬಿ.ಎಸ್. ಸತ್ಯನಾರಾಯಣರವರು ಮಂಡಿಸಿದ ನಿರ್ಣಯವನ್ನು ಶ್ರೀ ಪಿ.ಎನ್. ಸದಾಶಿವರವರು ಅನುಮೋದಿಸಿದರು

ಮಹಾಪೌರರು ನಿರ್ಣಯವನ್ನು ಮತಕ್ಕೆ ಹಾಕಲಾಗಿ ಸಭೆಯು ಬಹುಮತದಿಂದ ಒಪ್ಪಿದೆ ಎಂದು ತೀರ್ಮಾನಿಸಿತು.

ನಿರ್ಣಯ:- ದಿನಾಂಕ: 15-05-2010ರ ಆಯುಕ್ತರ ಟಿಪ್ಪಣಿಯನ್ನು ಒಪ್ಪಿದೆ.

(ಎಸ್.ಕೆ. ನಟರಾಜು)
ಮಹಾಪೌರರು